

بسم اللهِ الرّحمٰن الرّحيم

# ಹಝ್ರತ್ ಮಸೀಹ್ ಮೌಊದ್[ಅ]ರ ಜೀವನ ಚರಿತ್ರೆಯ ಹಿನ್ನೆಲೆಯಲ್ಲಿ ತೌಹೀದಿನ ವಿಶ್ವಾಸವರ್ಧಕ ವಿವರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10-04-2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಮಸೀಹ್ ಮೌಊದ್[ಅ] ತಮ್ಮ ಯಜಮಾನರಾದ ಹಝ್ರತ್ ಪೈಗಂಬರ್[ಸ]ರ ಅನುಸರಣೆಯಲ್ಲಿ ತೌಹೀದನ್ನು ಸ್ಥಾಪಿಸಲು ಮಾಡಿದ ಪ್ರಯತ್ನಗಳು, ಅವರ ಪ್ರಾಯೋಗಿಕ ಮಾದರಿ, ತಮ್ಮ ಅನುಯಾಯಿಗಳಿಗೆ ನೀಡಿದ ಉಪದೇಶಗಳು ಮತ್ತು ಅವರಿಗೆ ಹೇಗೆ ತರಬೇತಿ ನೀಡುತ್ತಿದ್ದರು ಎಂಬುದರ ಕುರಿತಾದ ಕೆಲವು ಘಟನೆಗಳನ್ನು ನಾನು ಪ್ರಸ್ತುತಪಡಿಸುತ್ತೇನೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಿದ್ದರು: ಒಬ್ಬ ವ್ಯಕ್ತಿಯ ಮಗನು ತೀರಿಹೋದನು. ಅವನ ಒಬ್ಬ ಸ್ನೇಹಿತ ಸಂತಾಪ ಸೂಚಿಸಲು ಅವನ ಬಳಿಗೆ ಹೋದಾಗ ಆತನು ಜೋರಾಗಿ ಅಳುತ್ತಾ, 'ದೇವನು ನನ್ನ ಮೇಲೆ ಬಹಳ ದೊಡ್ಡ ದೌರ್ಜನ್ಯ ಮಾಡಿದ್ದಾನೆ' ಎಂದು ಹೇಳಲಾರಂಭಿಸಿದನು. ದೇವನು ಅವನ ಯಾವುದೋ ಒಂದು ಹಕ್ಕನ್ನು ಕಸಿದುಕೊಂಡಿದ್ದಾನೆ ಎಂದು ಆತನು ಭಾವಿಸುತ್ತಾನೆ. ಆದರೆ ಒಬ್ಬ ದಾಸನಿಗೆ ದೇವನ ಮೇಲೆ ಇರುವ ಹಕ್ಕಾದರೂ ಏನು? ಎಂದು ನಾವು ಯೋಚಿಸಬೇಕು.

ನಮಗೆ ಸಿಕ್ಕಿರುವ ಅನುಗ್ರಹಗಳು ಮತ್ತು ಸಂತಾನವು ಅಲ್ಲಾಹನ ಕೃಪೆಯಿಂದಲೇ ಲಭಿಸಿದೆ ಎಂದು ಮನುಷ್ಯನು ಯಾವಾಗಲೂ ಯೋಚಿಸಬೇಕು. ಈ ವಿಷಯವು ಅಗತ್ಯಪಡಿಸುವುದೇನೆಂದರೆ, ನಾವು ಯಾವಾಗಲೂ ಅಲ್ಲಾಹನ ಮುಂದೆ ತಲೆಬಾಗಿರಬೇಕು, ನಾವು ನಮ್ಮ ಪ್ರತಿಯೊಂದು ಮಾತು ಮತ್ತು ಕೃತಿಯಿಂದ ಅವನ ತೌಹೀದನ್ನು ಪ್ರಕಟಪಡಿಸಬೇಕು, ನಮ್ಮಲ್ಲಿ ಎಂದಿಗೂ ಶಿರ್ಕಿನ ಸಣ್ಣ ಅಂಶ ಕೂಡ ಇರಬಾರದು ಮತ್ತು ಅಲ್ಲಾಹನ ಮೇಲೆ ನಮ್ಮದೇನೋ ಹಕ್ಕಿದೆ ಎಂದು ಎಂದಿಗೂ ಭಾವಿಸಬಾರದು. ಸ್ವಲ್ಪ ಆರಾಧನೆ ಮಾಡಿದ ಮಾತ್ರಕ್ಕೆ ಯಾವುದೇ ಹಕ್ಕನ್ನು ಪೂರೈಸಿದಂತಾಗುವುದಿಲ್ಲ, ಬದಲಾಗಿ ಅದನ್ನು ನಾವು ನಮ್ಮದೇ ಲಾಭಕ್ಕಾಗಿ ಮಾಡುತ್ತೇವೆ.

ಹಝ್ರತ್ ಮಸೀಹ್ ಮೌಊದ್[ಅ]ರಿಗೆ ತನ್ನ ಪುತ್ರ ಮಿರ್ಝಾ ಮುಬಾರಕ್ ಅಹ್ಮದ್‌ರ ಮೇಲೆ ಬಹಳ ಪ್ರೀತಿಯಿತ್ತು. ಪುತ್ರನ ಅನಾರೋಗ್ಯದ ಸಮಯದಲ್ಲಿ ಅವರು ಬಹಳಷ್ಟು ಆರೈಕೆ ಮಾಡಿದ್ದರು. ಇದರಿಂದಾಗಿ, ಒಂದು ವೇಳೆ ಮುಬಾರಕ್ ಅಹ್ಮದ್ ಮೃತಪಟ್ಟರೆ ಹಝ್ರತ್ ಮಸೀಹ್ ಮೌಊದ್[ಅ]ರಿಗೆ ಅತೀವ ದುಃಖವಾಗಬಹುದು ಎಂದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ]ರಿಗೂ ಅನಿಸುತ್ತಿತ್ತು. ಆದರೆ ಮುಬಾರಕ್ ಅಹ್ಮದ್ ತೀರಿಕೊಂಡಾಗ, ಹಝ್ರತ್ ಮಸೀಹ್ ಮೌಊದ್[ಅ] ಅತ್ಯಂತ ತಾಳ್ಮೆಯಿಂದ ತನ್ನ ಸ್ನೇಹಿತರಿಗೆ ಹೀಗೆ ಪತ್ರ ಬರೆಯಲಾರಂಭಿಸಿದರು: 'ಮುಬಾರಕ್ ಅಹ್ಮದ್ ಮರಣ ಹೊಂದಿದ್ದಾನೆ, ಆದರೆ ಇದರಿಂದ ಗಾಬರಿಪಡಬಾರದು. ಇದು ಅಲ್ಲಾಹನ ಇಚ್ಛೆಯಾಗಿತ್ತು, ಅದರ ಕುರಿತು ನಾವು ತಾಳ್ಮೆ ವಹಿಸಬೇಕು.' ಅನಂತರ ಹೊರಗೆ ಬಂದು ಮುಗುಳ್ನಗುತ್ತಾ ಭಾಷಣ ಮಾಡಲಾರಂಭಿಸಿದರು. ಮುಬಾರಕ್ ಅಹ್ಮದ್ ಬಗ್ಗೆ ಅಲ್ಲಾಹನ ಇಲ್‌ಹಾಮ್ ಪೂರ್ಣಗೊಂಡಿದೆ ಎಂದು ಹೇಳಿದರು. ಈ ಕುರಿತು ಹಝ್ರತ್ ಮಸೀಹ್ ಮೌಊದ್[ಅ]ರ ಹೀಗೊಂದು ಕವನ ಸಹ ಇದೆ: ಬುಲಾನೇವಾಲಾ ಹೇ ಸಬ್‌ಸೇ ಪ್ಯಾರಾ, ಉಸೀ ಪೆ ಏ ದಿಲ್ ತೂ ಜಾನ್ ಫಿದಾ ಕರ್. (ಕರೆಯುವವನೇ ಅತ್ಯಂತ ಪ್ರಿಯನು, ಹೇ ಹೃದಯ, ಅವನಿಗೆ ನಿನ್ನ ಪ್ರಾಣವನ್ನು ಅರ್ಪಿಸು).

ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳುತ್ತಿದ್ದರು: ಸುಲ್ತಾನ್ ಅಬ್ದುಲ್ ಹಮೀದ್ ಖಾನ್‌ರ ಅನೇಕ ವಿಷಯಗಳು ತಪ್ಪಾಗಿದ್ದರೂ, ಅವರ ಒಂದು ಮಾತು ನನಗೆ ಬಹಳ ಇಷ್ಟವಾಗಿತ್ತು. ಮಂತ್ರಿಗಳು ಯುದ್ಧದಿಂದ ಬಿಟ್ಟುನಿಲ್ಲಲು ವಿವಿಧ ಕೊರತೆಗಳು ಮತ್ತು ಸಮಸ್ಯೆಗಳನ್ನು ಅವರ ಮುಂದಿಟ್ಟಾಗ, 'ಕೆಲವು ವಿಷಯಗಳನ್ನು ದೇವನಿಗೆ ಬಿಡಬೇಕು' ಎಂದು ಸುಲ್ತಾನನು ಹೇಳಿದನು. ಈ ಘಟನೆಯ ಮೂಲಕ ಹಝ್ರತ್ ಮಸೀಹ್ ಮೌಊದ್[ಅ] ದೇವನ ಮೇಲಿನ ಸಂಪೂರ್ಣ ಭರವಸೆಯ ಪ್ರಾಮುಖ್ಯತೆಯನ್ನು ವಿವರಿಸಿದರು.

ಹಝ್ರತ್ ಮಸೀಹ್ ಮೌಊದ್[ಅ]ರಿಗೆ ತಲೆಸುತ್ತಿನ ಕಾಯಿಲೆಯಿತ್ತು. ಈ ಬಗ್ಗೆ ವಿಶೇಷ ಪರಿಣತಿಯನ್ನು ಹೊಂದಿರುವ ವೈದ್ಯನೊಬ್ಬನ ಬಗ್ಗೆ ಮಾಹಿತಿ ಲಭಿಸಿತು. ಅದರಂತೆ ಆ ವೈದ್ಯನನ್ನು ಕರೆಯಿಸಲಾಯಿತು. ಆತನು ಹಝ್ರತ್ ಮಸೀಹ್

ಮೌಊದ್(ಅ)ರನ್ನು ನೋಡಿ ಹೀಗೆ ಹೇಳಿದನು: 'ನಾನು ಕೇವಲ ಎರಡು ದಿನಗಳಲ್ಲಿ ನಿಮ್ಮನ್ನು ಗುಣಮುಖನನ್ನಾಗಿ ಮಾಡುತ್ತೇನೆ'. ಇದನ್ನು ಕೇಳಿ ಹಝ್ರತ್ ಮಸೀಹ್ ಮೌಊದ್(ಅ) ಒಳಗೆ ಹೋದರು ಮತ್ತು ಹಝ್ರತ್ ಮೌಲವಿ ನೂರುದ್ದೀನ್(ರ)ರಿಗೆ ಕಾಗದದಲ್ಲಿ ಹೀಗೆ ಬರೆದು ಕೊಟ್ಟರು: 'ನಾನು ಈ ವ್ಯಕ್ತಿಯಿಂದ ಖಂಡಿತವಾಗಿಯೂ ಚಿಕಿತ್ಸೆ ಪಡೆಯಲು ಬಯಸುವುದಿಲ್ಲ. ಇವನೇನು ಸ್ವತಃ ದೇವನೆಂದು ಹೇಳಿಕೊಳ್ಳುತ್ತಿದ್ದಾನೆಯೇ? ಅವನಿಗೆ ಹಿಂದಿರುಗುವ ಪ್ರಯಾಣದ ವೆಚ್ಚ ಹಾಗೂ ಹೆಚ್ಚುವರಿಯಾಗಿ 25 ರೂಪಾಯಿಗಳನ್ನು ನೀಡಿ ಅವನನ್ನು ಕಳುಹಿಸಿರಿ.'

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಿದ್ದರು: ದೇವನ ಮಹಿಮೆ ಮತ್ತು ಗೌರವಕ್ಕಾಗಿ ಯಾರು ಉತ್ಸಾಹವನ್ನು ಹೊಂದಿರುತ್ತಾರೋ, ಅವರನ್ನು ದೇವನು ಪ್ರೀತಿಸುತ್ತಾನೆ. ಇಂತಹ ಜನರು ಒಂದು ಸೂಕ್ಷ್ಮವಾದ ಮಾರ್ಗದಲ್ಲಿ ಸಾಗುತ್ತಾರೆ. ಸಾಮಾನ್ಯ ವ್ಯಕ್ತಿಗಳಿಗೆ ಅವರ ಜೊತೆಗೆ ಸಾಗಲು ಸಾಧ್ಯವಿಲ್ಲ. ದೇವನಿಗಾಗಿ ಆವೇಶವಿಲ್ಲದೇ ಮನುಷ್ಯನಿಗೆ ಯಾವುದೇ ಆನಂದವು ಲಭಿಸಲು ಸಾಧ್ಯವಿಲ್ಲ. ಮನುಷ್ಯನ ಹೃದಯದಲ್ಲಿ ಅಲ್ಲಾಹನಿಗಾಗಿ ವೈಯಕ್ತಿಕ ತುಡಿತ ಉಂಟಾಗುವ ತನಕ ಹಾಗೂ ಸ್ವಾರ್ಥ ಮತ್ತು ಲೌಕಿಕ ಲಾಭದ ಆಲೋಚನೆಗಳಿಂದ ಮನುಷ್ಯನು ಮುಕ್ತನಾಗದೆ ಯಾವುದೇ ಆರಾಧನೆ ಮತ್ತು ದಾನ ಧರ್ಮಗಳು ಸ್ವೀಕರಿಸಲ್ಪಡದು.

ಆದ್ದರಿಂದ ಪ್ರಾರ್ಥನೆಗಳ ಸ್ವೀಕಾರಕ್ಕಾಗಿ, ತೌಹೀದಿನ ಮೇಲೆ ಸಂಪೂರ್ಣವಾದ ದೃಢವಿಶ್ವಾಸ ಮತ್ತು ನಂಬಿಕೆ ಇರಬೇಕು. ಅಲ್ಲಾಹನ ಪ್ರೀತಿಯನ್ನು ಪಡೆಯಲು ಎಲ್ಲಕ್ಕಿಂತ ಮೊದಲು ದುಆ ಮಾಡಬೇಕು. 'ನಾವು ಬಹಳಷ್ಟು ದುಆ ಮಾಡಿದೆವು, ಹಾಗೆ ಮಾಡಿದೆವು–ಹೀಗೆ ಮಾಡಿದೆವು, ನಫಲ್ ನಮಾಝ್ ನಿರ್ವಹಿಸಿದೆವು, ಸದಖ ನೀಡಿದೆವು, ಆದರೂ ನಮ್ಮ ದುಆ ಸ್ವೀಕರಿಸಲ್ಪಟ್ಟಿಲ್ಲ' ಎಂದು ನನಗೆ ಪತ್ರ ಬರೆಯುವವರು ಈ ವಿಷಯದ ಬಗ್ಗೆ ಸ್ವಲ್ಪ ಗಮನಹರಿಸಬೇಕು. ಇದು ಹಝ್ರತ್ ಮಸೀಹ್ ಮೌಊದ್(ಅ) ತಿಳಿಸಿಕೊಟ್ಟಿರುವ ಪರಿಹಾರ ಮಾರ್ಗವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ)ರನ್ನು ಉದ್ದೇಶಿಸಿ ಅಲ್ಲಾಹನು ಹೀಗೆ ಹೇಳಿದನು: 'ಈ ಯುಗದಲ್ಲಿ ನೀನು ನನ್ನ ತೌಹೀದಿನ ಧ್ವಜವಾಹಕನಾಗಿರುವಿ ಮತ್ತು ನೀನು ಕಳೆದುಹೋಗಿರುವ ತೌಹೀದಿನ ಸಂಪತ್ತನ್ನು ಲೋಕದಲ್ಲಿ ಮರುಸ್ಥಾಪಿಸುತ್ತಿದ್ದೀಯಾ. ಆದ್ದರಿಂದ, ಎಲೈ ಮುಹಮ್ಮದೀಯ ಮಸೀಹಾ, ನೀನು ನನಗೆ ನನ್ನ ತೌಹೀದ್ ಮತ್ತು ಏಕತ್ವದಷ್ಟೇ ಪ್ರಿಯನಾಗಿದ್ದೀಯೆ. ಕ್ರೈಸ್ತರು ಸುಳ್ಳು ಮತ್ತು ಅಪವಾದದ ಮೂಲಕ ತಮ್ಮ ಮಸೀಹನನ್ನು ದೇವನ ನೈಜ ಪುತ್ರನನ್ನಾಗಿ ಮಾಡಿಕೊಂಡಿರುವುದರಿಂದ, ನನ್ನ ಸ್ವಾಭಿಮಾನವು ನಾನು ನಿನ್ನೊಡನೆ ಸಂತಾನದಷ್ಟೇ ಪ್ರೀತಿಯನ್ನು ತೋರಬೇಕೆಂದು ಬಯಸಿತು. ಹಝ್ರತ್ ಪೈಗಂಬರ್(ಸ)ರ ಶಿಷ್ಯರು ಕೂಡ 'ಅಲ್ಲಾಹನ ಮಕ್ಕಳು' ಎಂಬ ಸ್ಥಾನವನ್ನು ತಲುಪಬಲ್ಲರು ಎಂಬುದು ಈ ಮೂಲಕ ಲೋಕಕ್ಕೆ ಪ್ರಕಟವಾಗಲಿ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಭೂಮಿಯ ವಿವಿಧೆಡೆಗಳಲ್ಲಿ, ಯುರೋಪ್ ಮತ್ತು ಏಷ್ಯಾದಲ್ಲಿ ನೆಲೆಸಿರುವ, ಉತ್ತಮ ಸ್ವಭಾವವನ್ನು ಹೊಂದಿರುವ ಎಲ್ಲ ಜನರನ್ನು ತೌಹೀದಿನತ್ತ ಸೆಳೆಯಲು ಮತ್ತು ತನ್ನ ದಾಸರನ್ನು ಒಂದೇ ಧರ್ಮದಲ್ಲಿ ಸೇರಿಸಲು ದೇವನು ಬಯಸುತ್ತಾನೆ. ದೇವನು ನನ್ನನ್ನು ಲೋಕಕ್ಕೆ ಕಳುಹಿಸಿದ ಉದ್ದೇಶವೂ ಇದೇ ಆಗಿದೆ. ಆದ್ದರಿಂದ ನೀವು ಈ ಉದ್ದೇಶವನ್ನು ಪಾಲಿಸಿರಿ. ಆದರೆ ಸೌಮ್ಯತೆ, ಸಭ್ಯತೆ ಮತ್ತು ದುಆಗಳಿಗೆ ಒತ್ತುಕೊಡುವ ಮೂಲಕ.

'ಲೋಕದಲ್ಲಿ ದೇವನ ತೌಹೀದ್ ಮತ್ತು ಹಝ್ರತ್ ಪೈಗಂಬರ್(ಸ)ರ ಘನತೆಯು ಸ್ಥಾಪಿತವಾಗಬೇಕು ಎಂಬುದರಲ್ಲೇ ನನ್ನ ಸಂಪೂರ್ಣ ಸಂತೋಷ ಅಡಗಿದೆ ಮತ್ತು ನನ್ನ ಆಗಮನದ ಮೂಲ ಉದ್ದೇಶವೂ ಇದೇ ಆಗಿದೆ.'

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ನನ್ನ ಬೈಅತಿನ ಮೂಲ ಉದ್ದೇಶವು, ದೇವನ ತೌಹೀದ್ ಮತ್ತು ಹಝ್ರತ್ ಪೈಗಂಬರ್(ಸ)ರ ಘನತೆಯು ಲೋಕದಲ್ಲಿ ಸ್ಥಾಪಿತವಾಗಬೇಕು ಎಂಬುದೇ ಆಗಿದೆ.' ಖಾದಿಯಾನಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರಿಗೆ 'ಪೀರಾನ್ ದತ್ತಾ' ಎಂಬ ಹೆಸರಿನ ಒಬ್ಬ ಸೇವಕನಿದ್ದನು. ಎಲ್ಲರೂ ಅವನನ್ನು ಅದೇ ಹೆಸರಿನಿಂದ ಕರೆಯುತ್ತಿದ್ದರು. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಆತನನ್ನು ಕರೆಯುವಾಗ 'ಪೀರೀ ದತ್ತಾ' ಎಂದು ಕರೆಯುತ್ತಿದ್ದರು. ಅಂದರೆ, ನನ್ನ ದೇವನಾದ ಅಲ್ಲಾಹನು ನನಗೆ ನೀಡಿದ ಸೇವಕ.

ಅಲ್ಲಾಹನು ದಿವ್ಯವಾಣಿಯ ಮೂಲಕ ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಹೀಗೆ ಹೇಳಿದನು: **ಖುಧಿತ್ತೌಹೀದ್ ಅತ್ತೌಹೀದ್ ಯಾ ಅಬ್‌ನಾಅಲ್ ಫಾರಿಸ್**. ಎಂದರೆ, 'ಹೇ ಫಾರಿಸಿನ ಮಕ್ಕಳೇ! ತೌಹೀದನ್ನು ಭದ್ರವಾಗಿ ಹಿಡಿದುಕೊಳ್ಳಿರಿ'. ಈ ದಿವ್ಯವಾಣಿಯು ಸ್ವಂತ ಉಳಿವು ಮತ್ತು ಪ್ರಗತಿಗಾಗಿ, ಹಝ್ರತ್ ಮಸೀಹ್ ಮೌಊದ್(ಅ)ರ ಸಂತತಿಗಾಗಿ ಮತ್ತು ಪ್ರತಿಯೊಬ್ಬ ಸತ್ಯವಿಶ್ವಾಸಿಗಾಗಿ ಆಗಿದೆ. ಹಝ್ರತ್ ಮಸೀಹ್ ಮೌಊದ್(ಅ)ರ ಬೈಅತಿನಲ್ಲಿ ಸೇರಿಕೊಳ್ಳುವಾಗ ಅವರ ಮಕ್ಕಳಲ್ಲಿ ಮತ್ತು ಅವರ ಸಂತತಿಯಲ್ಲಿ ನಾವು ಸೇರಿಕೊಳ್ಳುತ್ತೇವೆ. ಇದನ್ನು ಭದ್ರವಾಗಿ ಹಿಡಿದುಕೊಂಡರೆ ಇಹಲೋಕ ಮತ್ತು ಪರಲೋಕದಲ್ಲಿ ಯಶಸ್ಸು ಲಭಿಸುವುದು, ಇಲ್ಲದಿದ್ದರೆ ರಕ್ತಸಂಬಂಧವಾಗಲಿ, ಕೇವಲ ಬೈಅತ್ ಮಾಡುವುದಾಗಲಿ ಯಾವುದೇ ಲಾಭವನ್ನು ನೀಡುವುದಿಲ್ಲ. ದೇವನಿಗೆ ಪ್ರತಿಯಾಗಿ ಮನುಷ್ಯನಿಗೆ ಗೌರವ ನೀಡುವುದನ್ನು ಹಝ್ರತ್ ಮಸೀಹ್ ಮೌಊದ್(ಅ) ತೀರಾ ಇಷ್ಟಪಡುತ್ತಿರಲಿಲ್ಲ. ಆದ್ದರಿಂದ ಅನೇಕ ಬಾರಿ ಹಸ್ತಲಾಘವ ಮಾಡುವಾಗ ಪಾದಗಳನ್ನು ಮುಟ್ಟುವುದರಿಂದ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಅನುಯಾಯಿಗಳನ್ನು ಅಥವಾ ಸಭಿಕರನ್ನು ಕಟ್ಟುನಿಟ್ಟಾಗಿ ತಡೆಯುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: 'ಯಾರಾದರೂ ನನ್ನ ಫೋಟೋ ತೆಗೆದು, ವಿಗ್ರಹಾರಾಧಕರಂತೆ ಅದನ್ನು ತಮ್ಮ ಬಳಿ ಇಟ್ಟುಕೊಳ್ಳುವುದನ್ನು ಅಥವಾ ಪ್ರಕಟಿಸುವುದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ನಾನು ಖಂಡಿತವಾಗಿಯೂ ಹಾಗೆ ಮಾಡಲು ಆದೇಶಿಸಿಲ್ಲ. ನಾನು ವಿಗ್ರಹಾರಾಧನೆ ಮತ್ತು ಚಿತ್ರಗಳ ಆರಾಧನೆಯ ಅತ್ಯಂತ ದೊಡ್ಡ ಶತ್ರು ಆಗಿರುವೆನು. ಆದರೆ ಇಂದಿನ ಕಾಲದಲ್ಲಿ ಯಾರಾದರೂ ಬರೆದ ಪುಸ್ತಕವನ್ನು ಓದಬೇಕಾದರೆ ಮೊದಲು ಅದನ್ನು ಬರೆದ ವ್ಯಕ್ತಿಯ ಭಾವಚಿತ್ರವನ್ನು ನೋಡಲು ಯುರೋಪಿನ ಜನರು ಬಯಸುತ್ತಾರೆ ಎಂಬುದನ್ನು ನಾನು ಗಮನಿಸಿದ್ದೇನೆ. ಏಕೆಂದರೆ ಯುರೋಪ್ ದೇಶಗಳಲ್ಲಿ ಮುಖಲಕ್ಷಣಗಳನ್ನು ಪತ್ತೆಹಚ್ಚುವ ಅರಿವು ಬಹಳ ಅಭಿವೃದ್ಧಿ ಹೊಂದಿದೆ. ಕೇವಲ ಚಿತ್ರವನ್ನು ನೋಡಿಯೇ ಇಂತಹ ವಾದಿ ಸತ್ಯವಂತನೋ ಅಥವಾ ಸುಳ್ಳುಗಾರನೋ ಎಂದು ಅವರಲ್ಲಿ ಹೆಚ್ಚಿನವರು ಗುರುತಿಸಬಲ್ಲರು. ಅವರು ಸಾವಿರಾರು ಮೈಲಿಗಳ ದೂರದಲ್ಲಿರುವುದರಿಂದ ನನ್ನ ಬಳಿಗೆ ಬರಲು ಅಥವಾ ನನ್ನ ಮುಖವನ್ನು ನೋಡಲು ಸಾಧ್ಯವಿಲ್ಲ. ಹಾಗಾಗಿ, ಆ ದೇಶದ ತಜ್ಞರು ಫೋಟೋದ ಮೂಲಕ ನನ್ನ ಆಂತರಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುತ್ತಾರೆ. ಯುರೋಪ್ ಅಥವಾ ಅಮೇರಿಕಾದಿಂದ ಅನೇಕರು ನನಗೆ ಹೀಗೆ ಪತ್ರ ಬರೆದಿರುವರು: 'ನಾವು ನಿಮ್ಮ ಫೋಟೋವನ್ನು ಬಹಳ ಗಮನವಿಟ್ಟು ನೋಡಿದ್ದೇವೆ ಮತ್ತು ಮುಖಲಕ್ಷಣಗಳ ಜ್ಞಾನದ ಆಧಾರದ ಮೇಲೆ, ಈ ಫೋಟೋದಲ್ಲಿರುವ ವ್ಯಕ್ತಿ ಸುಳ್ಳುಗಾರನಲ್ಲ ಎಂದು ನಾವು ಒಪ್ಪಿಕೊಳ್ಳಲೇಬೇಕಾಯಿತು'. ಅಮೇರಿಕಾದ ಓರ್ವ ಮಹಿಳೆ ನನ್ನ ಫೋಟೋವನ್ನು ನೋಡಿ, ಇದು ಯೇಸು ಮಸೀಹರ ಚಿತ್ರವಾಗಿದೆ ಎಂದು ಹೇಳಿದ್ದಾಳೆ. ಆದ್ದರಿಂದ, ಈ ಉದ್ದೇಶಕ್ಕಾಗಿ ಮತ್ತು ಈ ಮಿತಿಯವರೆಗೆ ಮಾತ್ರ, ಈ ಪದ್ಧತಿಯು ಮುಂದುವರಿಯುವುದರ ಬಗ್ಗೆ ನಾನು ಮೌನವಹಿಸಿದ್ದೇನೆ. ಫೋಟೋ ಮತ್ತು ಚಿತ್ರಗಳ ಮೂಲಕ ಅರಿವಿನಲ್ಲಿ ಬಹಳ ಅಭಿವೃದ್ಧಿಯಾಗಿದೆ. ಉದಾಹರಣೆಗೆ, ಪ್ರಾಣಿಗಳು ಮತ್ತು ರೋಗಗಳನ್ನು ಗುರುತಿಸುವಲ್ಲಿ ಇದು ಸಹಾಯ ಮಾಡುತ್ತದೆ. ಆದ್ದರಿಂದ ಅವುಗಳನ್ನು ಹರಾಮ್ ಎಂದು ಹೇಳುವುದು ಸರಿಯಲ್ಲ. ಶಿರ್ಕ್ ಅಥವಾ ನಿರರ್ಥಕ ಸಂಗತಿಗಳ ಕಡೆಗೆ ಕೊಂಡೊಯ್ಯುವ ಕಾರ್ಯಗಳನ್ನು ಮಾತ್ರ ಇಸ್ಲಾಂ ನಿಷೇಧಿಸುತ್ತದೆಯೇ ಹೊರತು, ಜ್ಞಾನ ಮತ್ತು ಉಪಯುಕ್ತ ಸಾಧನವಾಗಿರುವ ವಸ್ತುಗಳನ್ನಲ್ಲ. ಆದರೆ ಶರತ್ತೇನೆಂದರೆ, ಚಿತ್ರಗಳು ಒಳ್ಳೆಯ ಉದ್ದೇಶಕ್ಕಾಗಿರಬೇಕು. ಅವುಗಳನ್ನು ಜೀವನೋಪಾಯದ ಸಾಧನವನ್ನಾಗಿ ಅಥವಾ ಉದ್ದೇಶರಹಿತ ಪ್ರಚಾರಕ್ಕಾಗಿ ಬಳಸಬಾರದು. ಏಕೆಂದರೆ ಈ ಮೂಲಕ ನಿಧಾನವಾಗಿ ಹೊಸ ನವೀನ ಪದ್ಧತಿಗಳು ಮತ್ತು ಶಿರ್ಕ್ ಹುಟ್ಟಿಕೊಳ್ಳುತ್ತದೆ. ಆದ್ದರಿಂದ ಎಚ್ಚರಿಕೆ ಮತ್ತು ನಿಯಂತ್ರಣ ಅವಶ್ಯಕವಾಗಿದೆ. **ಇನ್ನಮಲ್ ಅಅ್‌ಮಾಲು ಬಿನ್ನಿಯಾತಿ**. ಕರ್ಮಗಳು ಉದ್ದೇಶಗಳನ್ನೇ ಅವಲಂಬಿಸಿವೆ.'

(ಹುಝೂರ್ ಹೇಳಿದರು:) ಇಂತಹ ನವೀನ ಆಚಾರಗಳು ನಮ್ಮ ಜನರಲ್ಲೂ ಶುರುವಾಗುತ್ತಿವೆ. ಕೆಲವರು ತಮ್ಮ ಮರಣಹೊಂದಿದವರ ಫೋಟೋಗಳನ್ನು ತಮ್ಮ ಬಳಿ ಇಟ್ಟುಕೊಳ್ಳುತ್ತಾರೆ. ಕೆಲವರು, ಇದು ನಮ್ಮ ಮರಣಹೊಂದಿದ ಹಿರಿಯರ ಫೋಟೋ ಆಗಿದೆ, ಅವರು ನಮ್ಮೊಂದಿಗೆ ಸೇರಿಕೊಂಡಿದ್ದಾರೆ ಎಂದು ತೋರಿಸಲು ಮದುವೆ ಸಮಾರಂಭಗಳಲ್ಲಿ ದೊಡ್ಡ ಫ್ರೇಮ್ ಮಾಡಿಸಿ ಹಾಕಿಕೊಳ್ಳುತ್ತಾರೆ. ಇವೆಲ್ಲವೂ ಶಿರ್ಕ್ ಮತ್ತ ನವೀನಾಚಾರಗಳಾಗಿವೆ. ಇದರಿಂದ ನಾವು ದೂರವಿರಬೇಕು. ಕೇವಲ ಒಳ್ಳೆಯ ಉದ್ದೇಶಕ್ಕಾಗಿ, ನೆನಪಿಗಾಗಿ ಆಲ್ಬಮ್‌ನಲ್ಲಿ ಚಿತ್ರಗಳನ್ನು ಇಟ್ಟುಕೊಳ್ಳುವುದು ಅನುಮತನೀಯವಾಗಿದೆ. ಆದರೆ ಅದನ್ನೇ ಒಂದು ಅಭ್ಯಾಸವನ್ನಾಗಿ ಮಾಡಿಕೊಳ್ಳುವುದು, ಪ್ರತಿದಿನ ಬೆಳಿಗ್ಗೆ ಎದ್ದು ಅದನ್ನು ನೋಡುವುದು, ಅದಕ್ಕೆ ಸಲಾಂ ಹೇಳುವುದು ಬಿದ್‌ಅತ್ ಆಗಿದೆ.

ಹಝ್ರತ್ ಮೌಲಾನಾ ಗುಲಾಮ್ ರಸೂಲ್ ರಾಜೇಕಿ[ರ] ವಿವರಿಸುತ್ತಾರೆ: 'ಇದು 1901ರ ಮಾತಾಗಿದೆ. ನಾನು ಹಝ್ರತ್ ಮಸೀಹ್ ಮೌಊದ್[ಅ]ರ ಸನ್ನಿಧಿಯಲ್ಲಿ ಹಾಜರಿದ್ದೆ. ಅವರು ದೇವನ ತೌಹೀದಿನ ಕುರಿತು ಭಾಷಣ ಮಾಡುತ್ತಾ ಹೀಗೆ ಹೇಳಿದರು: ಕೆಲವರು ಬೇರೆಯವರ ಉಪಕಾರದ ಮೇಲೆ 'ಅಲ್‌ಹಮ್ದುಲಿಲ್ಲಾಹ್' ಎಂದು ಹೇಳುವ ಬದಲು ನೇರವಾಗಿ 'ಜಝಾಕಲ್ಲಾಹ್' ಎಂದು ಹೇಳಿಬಿಡುತ್ತಾರೆ. ಆಳವಾಗಿ ಯೋಚಿಸಿದರೆ, ಇದು ಕೂಡ ಒಂದು ರೀತಿಯಲ್ಲಿ ಶಿರ್ಕಿನ ಅಂಶವನ್ನು ಹೊಂದಿದೆ. ಏಕೆಂದರೆ ನಿಜವಾಗಿಯೂ ಉಪಕಾರ ಮಾಡಿದವನು ಅಲ್ಲಾಹನು ಆಗಿರುತ್ತಾನೆ. ಆದ್ದರಿಂದ, ಮೊದಲು ಅಲ್ಲಾಹನ ಸ್ತುತಿ ಮತ್ತು ಗುಣಗಾನ ಮಾಡಿದ ನಂತರ ಆ ಉಪಕಾರಕ್ಕಾಗಿ 'ಜಝಾಕಲ್ಲಾಹ್' ಎಂದು ಹೇಳಬೇಕು.'

ಹಝ್ರತ್ ಮಸೀಹ್ ಮೌಊದ್[ಅ]ರ ಕೊನೆಯ ಲಾಹೋರ್ ಪ್ರಯಾಣದ ವಿವರಗಳನ್ನು ಒಳಗೊಂಡ ಲೇಖನವೊಂದರಲ್ಲಿ ಹಝ್ರತ್ ಭಾಯಿ ಅಬ್ದುರ್ರಹ್ಮಾನ್ ಖಾದಿಯಾನಿ[ರ] ಹೀಗೆ ಬರೆಯುತ್ತಾರೆ: 'ಮರಣಕ್ಕೆ ಕೆಲವು ದಿನಗಳ ಮೊದಲು ಹಝ್ರತ್ ಮಸೀಹ್ ಮೌಊದ್[ಅ]ರನ್ನು ಭೇಟಿಯಾಗಲು ಕೆಲವು ಮಹಿಳೆಯರು ಆಗಮಿಸಿದ್ದರು. ಹಝ್ರತ್ ಮಸೀಹ್ ಮೌಊದ್[ಅ] ಕೆಲಸದಲ್ಲಿ ಬಹಳ ನಿರತರಾಗಿದ್ದರಿಂದ ಅವರನ್ನು ಬೇಗನೇ ಮರಳಿಸಲು ಬಯಸಿದರು. ಆದರೆ ಮಹಿಳೆಯರು ವಿನಂತಿ ಮಾಡುತ್ತಾ, ಏನಾದರೂ ಉಪದೇಶ ನೀಡುವಂತೆ ಕೇಳಿಕೊಂಡರು. ಹಝ್ರತ್ ಮಸೀಹ್ ಮೌಊದ್[ಅ] ಕೆಲಸದಲ್ಲಿ ಅತೀವ ನಿರತರಾಗಿದ್ದರೂ ಅವರ ವಿನಂತಿಯನ್ನು ಒಪ್ಪಿಕೊಂಡು, ತೌಹೀದಿನ ಬಗ್ಗೆ ಉಪದೇಶ ನೀಡಿದರು ಮತ್ತು ವಿಗ್ರಹಾರಾಧನೆಯನ್ನು ಮಾಡುವುದರಿಂದ ಬಿಟ್ಟುನಿಲ್ಲಲು ಹೇಳಿದರು.

ಮತ್ತೊಂದು ಭಾಷಣದಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳಿದರು: 'ಈಸಾ ಮಸೀಹರನ್ನು ಸಾಯಲು ಬಿಡಿ, ಅದರಲ್ಲೇ ಇಸ್ಲಾಮಿನ ಜೀವ ಅಡಗಿದೆ. ಮುಹಮ್ಮದೀಯ ಮಸೀಹರ ಆಗಮನವಾಗಲಿ, ಅದರಲ್ಲೇ ಇಸ್ಲಾಮಿನ ಶ್ರೇಷ್ಠತೆಯಿದೆ.'

ಆದ್ದರಿಂದ ತೌಹೀದಿನ ಸಂದೇಶವನ್ನು ತಲುಪಿಸಲು ಮತ್ತು ಅದನ್ನು ನಮ್ಮ ಜೀವನದ ಭಾಗವಾಗಿಸಿಕೊಳ್ಳಲು ಸಂಪೂರ್ಣ ಪ್ರಯತ್ನ

ಮಾಡಬೇಕು. ಇದು ಇಂದು ಮುಹಮ್ಮದೀಯ ಮಸೀಹರ ದಾಸರ ಕರ್ತವ್ಯವಾಗಿದೆ. ಅಲ್ಲಾಹನು ನಮಗೆ ಈ ಕಾರ್ಯವನ್ನು ನೆರವೇರಿಸುವ ಸೌಭಾಗ್ಯವನ್ನು ದಯಪಾಲಿಸಲಿ. ಆಮೀನ್.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಲೋಕದ ಹಾಗೂ ವಿಶೇಷವಾಗಿ ಇಂದು ಮುಸ್ಲಿಂ ದೇಶಗಳ ಪ್ರಸ್ತುತ ಪರಿಸ್ಥಿತಿಗಳು ಹೇಗಿವೆ ಎಂಬುದು ಪ್ರತಿಯೊಬ್ಬರಿಗೂ ತಿಳಿದೇ ಇದೆ; ಬಹಳಷ್ಟು ದುಆದ ಅಗತ್ಯವಿದೆ. ಹೆಸರಿಗೇನೋ ಕದನ ವಿರಾಮವಾಗಿದೆ, ಆದರೆ ಇದು ದೀರ್ಘಕಾಲ ಉಳಿಯುವುದಾಗಿ ಅನಿಸುತ್ತಿಲ್ಲ. ಬದಲಾಗಿ, ಈಗಲೇ ಅದರಲ್ಲಿ ಬಿರುಕುಗಳು ಉಂಟಾಗುತ್ತಿವೆ. ಹೇಗಾದರೂ ಲೆಬನಾನ್ ಮೇಲೆ ದಾಳಿ ನಡೆಸಿ, ಇರಾನಿಯನ್ನರನ್ನು ಪ್ರಚೋದಿಸಿ ಅವರಿಂದ ಪ್ರತಿದಾಳಿ ಮಾಡಿಸಬೇಕೆಂಬುದು ಇಸ್ರೇಲ್ ಸರ್ಕಾರದ ಪ್ರಯತ್ನವಾಗಿದೆ. ಈಗ ಕೆಲವು ಯುರೋಪಿಯನ್ ಮುಖಂಡರು ಕೂಡ ಅವರ ಈ ಕೃತ್ಯವನ್ನು ಖಂಡಿಸಿದ್ದಾರೆ. ಕನಿಷ್ಠ ಪಕ್ಷ ಕೆಲವರಾದರೂ ಧ್ವನಿ ಎತ್ತುವ ಮೂಲಕ ಒಂದಿಷ್ಟು ನೈತಿಕತೆಯನ್ನಾದರೂ ಪ್ರದರ್ಶಿಸಿದ್ದಾರೆ. ಆದರೆ ಅವರ ಪ್ರಯತ್ನ ಇಷ್ಟಕ್ಕೆ ಮಾತ್ರ ಸೀಮಿತವಾಗಿರುವುದು. ಏಕೆಂದರೆ ಅವರಲ್ಲಿರುವ ನೈತಿಕತೆ ಇಷ್ಟು ಮಾತ್ರವಾಗಿದೆ. ಇದಕ್ಕಿಂತ ಹೆಚ್ಚಿನ ಪ್ರಯತ್ನ ಮಾಡಲು ಅವರು ಬಯಸಲಾರರು. ಮಾತ್ರವಲ್ಲ ಅದಕ್ಕಿರುವ ಧೈರ್ಯ ಮತ್ತು ಶಕ್ತಿಯೂ ಅವರಿಗೆ ಇಲ್ಲ. ಹೇಗಿದ್ದರೂ ನಾವು ದುಆ ಮಾಡಬೇಕಾಗಿದೆ. ಅಲ್ಲಾಹನು ಮುಸ್ಲಿಮರ ಮೇಲೆ ಕರುಣೆ ತೋರಲಿ.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۖ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

At, ***'Masjid Mubarak',*** *Islamabad, Tilford,* U.K. On 10-04-2026

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim | ***Layout**:* Basheer K.P. Manjeshwar

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon